ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 21st December 1972./Margasira 30, 1894 S.E.

The House met in the Assembly Chamber, Vidhana Soudha, at Nine of the Clock.

MADAM SPEAKER (Smt. K. S. Nagarathnamma) in the Chair.

News Paper report about statements of Sri H.D. DeveGowda.—

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ವಿಜ್ಞಾಪನೆ. ಈ ಸದನದ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರವರು ಮೇಲ್ಮನೆಯ ಸದಸ್ಯರಾದ ಶ್ರೀ ಬಸವರಾಜಕಟ್ಟೀಮನಿಯವರ ಬಗ್ಗೆ ಅಗೌರವಯುತವಾದ ಕೆಲವು ಮಾತುಗಳನ್ನು ಇಲ್ಲಿ ಭಾಷಣ ಮಾಡುವಾಗ ಹೇಳಿದರು ಎಂದು ಪತ್ರಿಕೆಗಳಲ್ಲೂ ಬಂದಿದೆ. ಮತ್ತು ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರವರೂ ಕೂಡ ಆ ಮಾತುಗಳನ್ನು ವಾಪಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೂ ಇದುವರೆಗೆ ಇದರ ಪ್ರಸ್ತಾಪವೇ ಇಲ್ಲಿ ಬರಲಿಲ್ಲ. ಇದರ ಬಗ್ಗೆ ತಾವು ಅವರಿಗೆ ಸೂಚನೆ ಕೊಡಬೇಕೆಂದು ಕೇಳುತ್ತೇನೆ. ಮತ್ತು ಈಗಲಾದರೂ ಅವರು ವಾಪಸು ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ.

Agitation by the Local Candidates

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಕಳೆದ ಐದಾರು ದಿನಗಳಿಂದ ಲೋಕಲ್ ಕ್ಯಾಂಡಿಡೇಟುರುಗಳ ವಿಷಯ ಇಲ್ಲಿ ಬರುತ್ತಿದೆ ಮತ್ತು ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳಿಕೆ ಕೊಟ್ಟು ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದರು ಮತ್ತು ನಾನು ಮತ್ತು ಶ್ರೀ ದೇವೇಗೌಡರವರು ಇದರ ಬಗ್ಗೆ ಮಾತನಾಡುವಾಗ ಹೇಳಿದ್ದೆವು. ಸುಮಾರು ಮೂರು ಸಾವಿರ ಜನರು ಈಗ ಲೋಕಲ್ ಕ್ಯಾಂಡಿಡೇಟುರುಗಳಾಗಿ ಕೆಲಸ ಮಾಡುತ್ತಿದ್ದಾರೆ, ಇವರನ್ನು ಇದೇ ತಿಂಗಳು ಆದ ನಂತರ ಕೆಲಸದಿಂದ ತೆಗೆದರೆ ಮುಂದೆ ಅವರಿಗೆ ಬಹಳ ಕಷ್ಟಗಳಾಗುತ್ತವೆ, ಇದರ ಬಗ್ಗೆ ಪರಿಶೀಲಿಸುತ್ತೇವೆ ಎಂದು ಹೇಳುವುದು ಅಸ್ಪಷ್ಟಸಂಜಸವಾಗಿ ಮುಖ್ಯ ಮಂತ್ರಿಗಳು ಹೇಳಿದ್ದರೂ ಇದುವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ. ಇದೇ ತಿಂಗಳ ೩೦ನೇ ತಾರೀಖಿನ ವೇಳೆಗೆ ಇವರ ಮೇಲೆ ಗದಾ ಪ್ರಹಾರವಾಗಲಿದೆ. ಸರಕಾರ ಇದರ ಬಗ್ಗೆ ಸ್ಪಷ್ಟವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದು ಇದುವರೆಗೂ ಗೊತ್ತಾಗಲಿಲ್ಲ, ಅವರೂ ಸಹ ವಿಧಾನಸೌಧದ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ, ಈಗ ಇರುವ ಮೂರು ಸಾವಿರ ಜನರಲ್ಲಿ ಸುಮಾರು ೪೦೦ ಜನ ಇಂಜನೀಯರುಗಳು ಹಾಗೂ ಡಾಕ್ಟರುಗಳು ಇನ್ನಿತರ ವರ್ಗದವರೂ ಇದ್ದಾರೆ, ಹಿಂದೆ ೧೯೬೯ ರಲ್ಲಿ ಕೂಡ ಇದೇ ಪ್ರಶ್ನೆ ಬಂದಾಗ ಅವರನ್ನು ರೆಗ್ಯುಲರೈಸು ಮಾಡಿ ಇನ್ನು ಮುಂದೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದರು. ಈಗಲೂ ಕೂಡ ಇದೇ ರೀತಿಯಾಗಿ ತಕ್ಕ ಕ್ರಮ ತೆಗೆದುಕೊಳ್ಳುವರೇ ಎನ್ನುವ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಹೇಳುತ್ತೇನೆ.